ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY

Scan For Digital Colourful
Hampi Times E-paper
www.hampitimes.com
epaper.hampitimes.com
CALL US : 9448633038
Email us Your Advertisement Content to : hampitimes@gmail.com

ಸಂಪುಟ:01	ಸಂಚಿಕೆ:252	ನೋಂದಣಿ ನಂ.:KARKAN27911	ವಿಜಯನಗರ	02.03.2024	ಶನಿವಾರ	ಪುಟ:04	ಬೆಲೆ:2
Volume:01	Issue:252	Reg.No:KARKAN27911	VIJAYANAGARA	02.03.2024	Saturday	Page:04	Rs:2

Place Your Ads Here
Reach a Wider Audience
Call Us for
Print & Digital Ads
9448633038

SHUBHA Ads C/o HAMPI TIMES, Bamboo Bazaar, Nr Valmiki Circle, Hosapete-583201 Vijayanagara Dist.

ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಶೋಭಾಕೃತ

02-03-2024 – ಶನಿವಾರ

ತಿಥಿ	: ಷಷ್ಠಿ
ಪಕ್ಷ	: ಕೃಷ್ಣ
ನಕ್ಷತ್ರ	: ವಿಶಾಖ
ಯೋಗ	: ವ್ಯಾಘಾತ
ಕರಣ	: ವಾಣಿಜ
ಸೂರ್ಯೋದಯ	: 06:48:41
ಸೂರ್ಯಾಸ್ತ	: 18:29:31
ರಾಹು	: 09:44–11:12
ಯಮಘಂಡ	: 14:07–15:34
ಗುಳಿಕ	: 06:49–08:16

ತುಂಗಭದ್ರಾ ನೀರಿನ ಮಟ್ಟ

ಶುಕ್ರವಾರ : 01-03-2024

ಗರಿಷ್ಠ ಮಟ್ಟ	1633 ಅಡಿ
ಇಂದಿನ ಮಟ್ಟ	1586.66 ಅಡಿ
ಒಳ ಹರಿವು	00 ಕ್ಯುಸೆಕ್
ಹೊರ ಹರಿವು	886 ಕ್ಯುಸೆಕ್
ಇಂದಿನ ಸಾಮರ್ಥ್ಯ	8.461 ಟಿಎಂಸಿ
ಗರಿಷ್ಠ ಸಾಮರ್ಥ್ಯ	105.788 ಟಿಎಂಸಿ
ಕಳೆದ ವರ್ಷ ಇದೇ ದಿನ	
ಇಂದಿನ ಮಟ್ಟ	1604.99 ಅಡಿ
ಒಳ ಹರಿವು	00 ಕ್ಯುಸೆಕ್
ಹೊರ ಹರಿವು	8044 ಕ್ಯುಸೆಕ್
ಸಾಮರ್ಥ್ಯ	28.689 ಟಿಎಂಸಿ

ವಿದ್ಯೆ ಒಲಿದರೆ ಬದುಕು ಬಂಗಾರ

ಶ್ರೀ ಹಾಲಸಿದ್ದೇಶ್ವರ ಸ್ವಾಮೀಜಿ ಅಭಿಮತ । ಶಾಲೆಯ ಹಳೇ ವಿದ್ಯಾರ್ಥಿಗಳಿಂದ ದೇಣಿಗೆ

ವಲ್ಲಭಾಪುರ ಶಾಲೆಯಲ್ಲಿ ಮೊರಾರ್ಜಿ ದೇಸಾಯಿ ಅವರ ಕಂಚಿನ ಪುತ್ಥಳಿ ಅನಾವರಣ

■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ

ವಿದ್ಯಾರ್ಥಿ ಜೀವನದಲ್ಲಿ ವಿದ್ಯೆ ಒಲಿದರೆ ಮುಂದಿನ ಗುರಿ ಸಾಧನೆಗೆ ಸುಗಮ, ಬದುಕು ಬಂಗಾರವಾಗುತ್ತೆ ಎಂದು ಪಟ್ಟಣದ ಶ್ರೀಹಾಲಸ್ವಾಮಿ ಮಠದ ಹಾಲಸಿದ್ದೇಶ್ವರ ಸ್ವಾಮೀಜಿ ಹೇಳಿದರು.

ತಾಲೂಕಿನ ವಲ್ಲಾಭಾಪುರದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದ್ದ, ಮೊರಾರ್ಜಿ ದೇಸಾಯಿಯವರ ಜಯಂತಿ ಆಚರಣೆಯಲ್ಲಿ ಶಾಲೆಯ ಹಳೇ ವಿದ್ಯಾರ್ಥಿಗಳು ದೇಣಿಗೆ ನೀಡಿದ, ಶ್ರೀಮೊರಾರ್ಜಿ ದೇಸಾಯಿಯವರ ಕಂಚಿನ ಪುತ್ಥಳಿ ಆನಾವರಣಗೊಳಿಸಿ ಮಾತನಾಡಿದರು. ಯಾರಿಂದಲೂ ಕದಿಯಲಾಗದ, ಕಸಿದುಕೊಳ್ಳಲಾಗದ, ಖರ್ಚಾಗದ್ದು ಯಾವುದು ಎಂದರೆ ಅದು ವಿದ್ಯೆ, ವಿದ್ಯೆಯಿಂದ ವಿನಯ, ವಿನಯದಿಂದ ಗೌರವ ಹೀಗೆ ಸಮಾಜದಲ್ಲಿ ನಾನಾ ರೀತಿಯ ಗೌರವ ಸಮರ್ಪಣೆಯಾಗಬೇಕಾದರೆ ಮೊದಲು ವಿದ್ಯೆಯನ್ನು ನೀನು ಕಲಿ, ತಾನಾಗಿಯೇ ಗೌರವ ತಂದುಕೊಡುತ್ತದೆ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಬಿಇಒ ಮೈಲೇಶ್ ಬೇವೂರ್ ಮಾತನಾಡಿ, ಯಾರು ಶಿಕ್ಷಣದಿಂದ ವಂಚಿತರಾಗಬಾರದು, ಸರ್ಕಾರದ ಸೌಲಭ್ಯಗಳು ಸಾಕಷ್ಟು ಇವೆ, ಉತ್ತಮ ಶಿಕ್ಷಣ ನೀಡಲು ವಸತಿ ಶಾಲೆಗಳ ಯೋಜನೆಗಳು ಇವೆ. ಅವುಗಳನ್ನು

ಬಳಸಿಕೊಂಡು ಉತ್ತಮ ಹಾಗೂ ಉನ್ನತ ಶಿಕ್ಷಣವನ್ನು ಪಡೆಯಬೇಕು ಎಂದರು.

ಶಾಲಾ ಪ್ರಾಂಶುಪಾಲರಾದ ಸಿ.ಜಯಸೂರ್ಯ ಪ್ರಾಸ್ತಾವಿಕವಾಗಿ ಮಾತನಾಡಿ, ಮೊರಾರ್ಜಿ ದೇಸಾಯಿಯವರ ಜಯಂತಿ ಅಂಗವಾಗಿ, 1996–97 ನೇ ಸಾಲಿನ ಪ್ರಪ್ರಥಮ ಹಳೇಯ ವಿದ್ಯಾರ್ಥಿಗಳು ಸವಿ ನೆನಪಿಗಾಗಿ, ಪುತ್ಥಳಿ ಬಳುವಳಿಯಾಗಿ ನೀಡಿರುವುದು ಶ್ಲಾಘನೀಯ. ಕಾರ್ಯಕ್ರಮಕ್ಕೆ ಅಧಿಕಾರಿ ವರ್ಗ ಹಾಗೂ ಶಾಲೆಯ ಎಲ್ಲಾ ಸಹಪಾಠಿಗಳು ಸಹಕರಿಸಿದ್ದು ಯಶಸ್ವಿಗೆ ಕಾರಣರಾಗಿದ್ದಾರೆ ಎಂದರು.

ಜಿಲ್ಲಾ ಶೈಕ್ಷಣಿಕ ನಿವೃತ್ತ ಸುಗಮಕಾರರು ಎಂ.ಸಿದ್ದೇಶ್ವರಯ್ಯ, ಸಮಾಜ ಕಲ್ಯಾಣ ಇಲಾಖೆಯ ನಿವೃತ್ತ ಸಿ.ಪಿ.ಮಾಣಿಕ್ಯಚಾರ್ಯರು, ಆದರ್ಶ ಶಾಲೆಯ ಮುಖ್ಯ ಶಿಕ್ಷಕ ಕೊಟ್ರೇಶಪ್ಪ, ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಹ್ಯಾಟಿ ಲೋಕಪ್ಪ ಸೇರಿದಂತೆ ಅನೇಕರು ಮಾತನಾಡಿದರು.

ಈ ವೇಳೆ ನಂದಿಪುರದ ಡಾ.ಮಹೇಶ್ವರ ಸ್ವಾಮೀಜಿ, ಗ್ರಾಮದವರೇ ಆದ ಸುಭಾಷ್ ಶಾಸ್ತ್ರಿ, ವಲ್ಲಾಭಾಪುರ ಗ್ರಾ.ಪಂ.ಯ ಸದಸ್ಯರಾದ ಕೆ.ಎಂ.ಚೈತ್ರ ಮಲ್ಲಿಕಾರ್ಜುನ, ರೇಖಾ ಸುರೇಶ್, ದೊಡ್ಡ ಹುಲುಗಪ್ಪ, ಸದಸ್ಯರು, ಸಮಾಜ ಸೇವಕ ಎ.ಎಂ.ಪಿ.ವಾಗೇಶ್, ಮುಖಂಡರಾದ ಶ್ಯಾನಬೋಗರ ನಾಗರಾಜ್,

> ಭಾರತದ ಸಂವಿಧಾನ ಪ್ರತಿಯೊಬ್ಬರಿಗೂ ಶಿಕ್ಷಣದ ಹಕ್ಕನ್ನು ನೀಡಿದೆ, ಅದಕ್ಕಾಗಿಯೇ ಸರ್ಕಾರಗಳು ಉಚಿತ ಶಿಕ್ಷಣವನ್ನು ಸಹ ನೀಡುತ್ತಿವೆ, ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಂಡ ತಾವುಗಳು ಉತ್ತಮ ಸ್ಥಾನಮಾನಗಳನ್ನು ಪಡೆಯಿರಿ.
>
> – ಆಂಜನೇಯ ಉಲ್ಲಾಳ್,
> ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ.

ಸಮಾಜ ಕಲ್ಯಾಣ ಇಲಾಖೆಯ ವ್ಯವಸ್ಥಾಪಕರಾದ ಶೋಭಾ, ಮೊರಾರ್ಜಿ ದೇಸಾಯಿ ಶಾಲೆಗಳ ಪ್ರಾಂಶುಪಾಲರಾದ ಹಂಪಮ್ಮ, ಗಂಗಾಧರ, ಇತರರು ಇದ್ದರು. ಸಂಜೆ ಶಾಲಾ ವಿದ್ಯಾರ್ಥಿಗಳಿಂದ ಸಾಂಸ್ಕೃತಿ ಕಾರ್ಯಕ್ರಮ ಜರುಗಿದವು. ವಿದ್ಯಾರ್ಥಿಗಳ ಪಾಲಕರು ಪೋಷಕರು ಪಾಲ್ಗೊಂಡಿದ್ದರು. ಇತ್ತೀಚೆಗೆ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರಾಗಿ ಆಯ್ಕೆಯಾದ ಇದೇ ಶಾಲೆಯ ಹಳೇ ವಿದ್ಯಾರ್ಥಿ ವಿಜಯಕುಮಾರ್ ಸೇರಿದಂತೆ ಎಸ್.ಎಸ್.ಎಲ್.ಸಿ ಕಳೆದ ವರ್ಷ ಉತ್ತಮ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಶಾಲೆಯಿಂದ ಸನ್ಮಾನಿಸಲಾಯಿತು.

ಸಂಗೀತ ಶಿಕ್ಷಕಿ ಶಾರದ ಮತ್ತು ಸಂಗಡಿಗರು, ಶಿಕ್ಷಕ ಡಿ.ಷಣ್ಮುಖಪ್ಪ, ಕೆ.ಎಂ.ವೀರಯ್ಯ ನಿರ್ವಹಿಸಿದರು.

ಹೊಸಪೇಟೆಯಲ್ಲಿ ಸಿಎಂ ಸಿದ್ದರಾಮಯ್ಯ ವಾಸ್ತವ್ಯ

ಹಂಪಿ ಟೈಮ್ಸ್ ಹೊಸಪೇಟೆ

ಸಿಎಂ ಸಿದ್ದರಾಮಯ್ಯನವರು ಮಾ.2ರಂದು ರಾತ್ರಿ ಕೊಪ್ಪಳ ಜಿಲ್ಲೆಯ ಕನಕಗಿರಿಯಿಂದ ನಿರ್ಗಮಿಸಿ, ರಾತ್ರಿ ಹೊಸಪೇಟೆಯಲ್ಲಿ ವಾಸ್ತವ್ಯ ಹೂಡುವರು. ಮಾ. 3ರಂದು ಬೆಳಿಗ್ಗೆ 9 ಗಂಟೆಗೆ ಕಮಲಾಪುರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟಂಬ ಕಲ್ಯಾಣ ಇಲಾಖೆಯಿಂದ ಹಮ್ಮಿಕೊಳ್ಳಲಾದ ಪಲ್ಸ್ ಪೋಲಿಯೋ ಕಾರ್ಯಕ್ರಮ ಉದ್ಘಾಟಿಸುವರು. ನಂತರ ಹಂಪಿ ವಿಶ್ವವಿದ್ಯಾಲಯ ಆವರದಣ ಹೆಲಿಪ್ಯಾಡ್ ಮೂಲಕ ಚಿಕ್ಕಮಗಳೂರು ಕಡೆಗೆ ಪ್ರಯಾಣ ಬೆಳೆಸುವರು ಎಂದು ವಿಜಯನಗರ ಅಪರ ಜಿಲ್ಲಾಧಿಕಾರಿ ಅನುರಾಧ ಜಿ ತಿಳಿಸಿದ್ದಾರೆ.

ಜನಸಾಮಾನ್ಯರಿಂದ ವಿಜ್ಞಾನದ ಅರಿವು

ವಿಸ್ಮಯಕಾರಿ ವಿಷಯಗಳ ಜ್ಞಾನವನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡ ಮಲ್ಲಯ್ಯ

■ ಹಂಪಿ ಟೈಮ್ಸ್ ಬಳ್ಳಾರಿ

ಇಲ್ಲಿಯ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಭೌತಶಾಸ್ತ್ರ ವಿಭಾಗದ ವತಿಯಿಂದ ಗುರುವಾರ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಖಗೋಳ ವಿಜ್ಞಾನ ಕ್ಷೇತ್ರದಲ್ಲಿ ಆಸಕ್ತಿ ಹೊಂದಿರುವ ಜಿಲ್ಲೆಯ ಮಲ್ಲಯ್ಯ ಎಂಬ ವ್ಯಕ್ತಿಯನ್ನು ವಿಭಾಗಕ್ಕೆ ಆಹ್ವಾನಿಸಿ ಅವರಲ್ಲಿ ಅಡಗಿರುವ ವಿಜ್ಞಾನ ಕ್ಷೇತ್ರದ ಕೌತುಕಗಳ ಕುರಿತು ವಿಭಾಗದ ವಿದ್ಯಾರ್ಥಿಗಳಿಗೆ ವಿವಿಧ ಆಯಾಮಗಳಲ್ಲಿ ಮಾಹಿತಿ ವಿನಿಯೋಗ ನಡೆಸಿದರು. ಶಾಲಾ ಮಟ್ಟದ ಶಿಕ್ಷಣ ಮಾತ್ರ ಪೂರೈಸಿರುವ ಮಲ್ಲಯ್ಯ ಅವರು ಖಗೋಳ ವಿಜ್ಞಾನ ಕುರಿತು ತಮ್ಮಲ್ಲಿರುವ

ವಿಸ್ಮಯಕಾರಿ ವಿಷಯಗಳ ಜ್ಞಾನವನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡರು.

ಜನಸಾಮಾನ್ಯರಿಗೆ ವಿಜ್ಞಾನದ ಅರಿವು ಮೂಡಿಸುವುದು ಮತ್ತು ಸಾಮಾನ್ಯ ಜನತೆಯಲ್ಲಿ ವಿಜ್ಞಾನದ ಬಗ್ಗೆ ಕುತೂಹಲ ಹೊಂದಿರುವ ವ್ಯಕ್ತಿಯನ್ನು ಗುರುತಿಸಿ ಅವರ ಜ್ಞಾನಕ್ಕೆ ವೇದಿಕೆ ಕಲ್ಪಿಸುವ ವಿನೂತನ ಪ್ರಯೋಗವು ವಿವಿ ವತಿಯಿಂದ ಮಾಡುತ್ತಿರುವುದು ಸಂತಸವಾಗಿದೆ ಎಂದರು.

ಪ್ರಸ್ತುತ ದಿನಗಳಲ್ಲಿ ವಿಜ್ಞಾನದ ಮಹತ್ವ ಕುರಿತು ಜನರಲ್ಲಿ ಅರಿವು ಮೂಡಿಸುವುದು, ವಿಜ್ಞಾನ ಕ್ಷೇತ್ರಕ್ಕೆ ಭಾರತದ ಕೊಡುಗೆ ಮತ್ತು ಪ್ರತಿನಿತ್ಯವೂ ವಿಜ್ಞಾನ ಕ್ಷೇತ್ರದಲ್ಲಿ ನಡೆಯುತ್ತಿರುವ ನ್ಯಾನೊಮಟೆರಿಯಲ್ಸ್ ಆ್ಯಂಡ್ ಇಟ್ಸ್ ಅಪ್ಲಿಕೇಶನ್ಸ್‌ನ ಇತ್ತೀಚಿನ ಆಯಾಮಗಳ ಕುರಿತು ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ವಿಶ್ವವಿದ್ಯಾಲಯದ ರಸಾಯನಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಪ್ರೊ.ಅರುಣಕುಮಾರ ಲಗಶೆಟ್ಟಿ ಹೇಳಿದರು.

ರಾಷ್ಟ್ರೀಯ ವಿಜ್ಞಾನ ದಿನದ ಪ್ರಯುಕ್ತ ಇತ್ತೀಚೆಗೆ ಜರುಗಿದ್ದ ಪೋಸ್ಟರ್ ಪ್ರದರ್ಶನದಲ್ಲಿ ವಿಜೇತರಾದ ಅಭ್ಯರ್ಥಿಗಳಿಗೆ ಬಹುಮಾನ ವಿತರಿಸ ಲಾಯಿತು. ಭೌತಶಾಸ್ತ್ರ ವಿಭಾಗ ಮುಖ್ಯಸ್ಥರಾದ ಪ್ರೊ.ತಿಪ್ಪೇರುದ್ರಪ್ಪ, ಪ್ರೊ.ಖಡ್ಕೆ ಉದಯಕುಮಾರ್, ಸಹಾಯಕ ಪ್ರಾಧ್ಯಾಪಕ ಡಾ.ಕೊಟ್ರೇಶ್ ಎಮ್.ಜಿ., ಡಾ.ಅವಿನಾಶ ಹಾಗೂ ಸಿಬ್ಬಂದಿ, ಸಂಶೋಧನಾರ್ಥಿಗಳು, ವಿದ್ಯಾರ್ಥಿಗಳು ಇದ್ದರು.

ಕನಕಗಿರಿ ಉತ್ಸವ: ಸಿಂಗಾರಗೊಂಡ ಸುವರ್ಣಗಿರಿ

■ ಹಂಪಿ ಟೈಮ್ಸ್ ಕೊಪ್ಪಳ

ಕನಕಗಿರಿ ಉತ್ಸವ–2024ರ ಆಚರಣೆಗೆ ಭರ್ಜರಿ ಸಿದ್ಧತೆ ನಡೆದಿದ್ದು, ಸುವರ್ಣಗಿರಿಯು ವಿದ್ಯುತ್ ದೀಪಾಲಂಕಾರದಿಂದ ಸಿಂಗಾರಗೊಂಡಿದೆ. ಮಾರ್ಚ್ 2 ಮತ್ತು 3ರಂದು ನಡೆಯಲಿರುವ ಕನಕಗಿರಿ ಉತ್ಸವಕ್ಕೆ ಕ್ಷಣಗಣನೆ ಶುರುವಾಗಿದ್ದು, ಐತಿಹಾಸಿಕ ಪುಣ್ಯ ಕ್ಷೇತ್ರವಾದ ಕನಕಗಿರಿಯಲ್ಲಿರುವ ಶ್ರೀ ಕನಕಾಚಲಾಪತಿ ದೇವಸ್ಥಾನದ ಪಂಚ ಗೋಪುರಗಳು, ಮಹಾರಥ ಹಾಗೂ ದೇವಸ್ಥಾನ ಆವರಣ, ವೆಂಕಟಪತಿ ಬಾಯಿ, ಪುಷ್ಕರಣಿ, ಐತಿಹಾಸಿಕ ಸ್ಮಾರಕಗಳು ಸೇರಿದಂತೆ ಕನಕಗಿರಿಯ ಪ್ರಮುಖ ರಸ್ತೆಗಳಲ್ಲಿ ವಿದ್ಯುತ್ ದೀಪಗಳಿಂದ ಕಂಗೊಳಿಸುತ್ತಿವೆ.

ನಾಳೆ ಸಹಸ್ರಕಂಠ ಸಾಮೂಹಿಕ ವಿಷ್ಣು ಸಹಸ್ರನಾಮ ಪಾರಾಯಣ

ವಿಷ್ಣು ಸೇವಾ ಸಂಸ್ಥೆ ಮುಖಂಡ ಯು.ರಾಘವೇಂದ್ರ ಹೇಳಿಕೆ । ಶ್ರೀಕೃಷ್ಣಮಠದಲ್ಲಿ ಬೆಳಿಗ್ಗೆ 8.30ಕ್ಕೆ

■ ಹಂಪಿ ಟೈಮ್ಸ್ ಹೊಸಪೇಟೆ

ನಗರದ ಜಂಬುನಾಥ ರಸ್ತೆ ಶ್ರೀಕೃಷ್ಣ ಮಠದಲ್ಲಿ ಮಾ.3 ರಂದು ಶ್ರೀ ವಿಷ್ಣು ಸೇವಾ ಸಂಸ್ಥೆವತಿಯಿಂದ 1008ನೆಯ ವಾರದ ಸಹಸ್ರಕಂಠ ಸಾಮೂಹಿಕ ವಿಷ್ಣು ಸಹಸ್ರನಾಮ ಪಾರಾಯಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿಯ ಮುಖಂಡರಾದ ಯು.ರಾಘವೇಂದ್ರ ಅವರು ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಶ್ರೀಮನ್ ಮರ್ಧವಾಚಾರ್ಯ ಮೂಲ ಮಹಾಸಂಸ್ಥಾನ, ವಾಮನತೀರ್ಥ ಪರಂಪರೆ ಶ್ರೀ ಶಿರೂರು ಮಠದ ಜಗದ್ಗುರು ಶ್ರೀ ವೇದವರ್ಧನತೀರ್ಥ ಶ್ರೀಪಾದರು ಸಾನ್ನಿಧ್ಯವಹಿಸುವರು. ವಿದ್ವಾನ್ ಶ್ರೀ ಎಲ್.ಎಸ್.ಬ್ರಹ್ಮಣ್ಯತೀರ್ಥಾಚಾರ್ಯ ಅವರಿಂದ ಪ್ರವಚನ ನಡೆಯಲಿದೆ. ಶ್ರೀ ವಿಷ್ಣು ಸೇವಾ ಸಂಸ್ಥೆ

ಅಧ್ಯಕ್ಷ ಯು.ನರಸಿಂಹಮೂರ್ತಿಅಧ್ಯಕ್ಷತೆವಹಿಸುವರು. ಬೆಳಿಗ್ಗೆ 8.30ಕ್ಕೆ ಸಾಮೂಹಿಕ ವಿಷ್ಣ ಸಹಸ್ರನಾಮ ಪಾರಾಯಣ–ಸಹಸ್ರಕಂಠ, ಬೆಳಿಗ್ಗೆ 10ಕ್ಕೆ ಸಭೆ ಕಾರ್ಯಕ್ರಮ ನಡೆಯಲಿದ್ದು, ಶ್ರೀಪಾದರಿಂದ ಅನುಗ್ರಹ ಸಂದೇಶ ನಂತರ ಶ್ರೀಪಾದರಿಂದ ಸಂಸ್ಥಾನ ಪೂಜೆ ಮತ್ತು ಮಂತ್ರಾಕ್ಷತೆ ಪ್ರಸಾದ ವಿತರಣೆ ಜರುಗಲಿದೆ ಎಂದರು.

ನಗರದಲ್ಲಿ 2004ರಲ್ಲಿ ವಿಷ್ಣುಸೇವಾ ಸಂಸ್ಥೆ ಪ್ರಾರಂಭವಾಗಿ ಎರಡು ದಶಕಗಳಲ್ಲಿ ಸಾಕಷ್ಟು ಆಧ್ಯಾತ್ಮಿಕ ಸೇವೆಗಳನ್ನು ನಡೆಸಲಾಗಿದೆ. ಪ್ರತಿ ವರ್ಷ ವಿದ್ವಾಂಸರಿಂದ ಪ್ರವಚನ, ಸಾಧಕರನ್ನು ಗೌರವಿಸುವುದು, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ, ಭಜನೆ ಇತರೆ ಧಾರ್ಮಿಕ ಕಾರ್ಯಕ್ರಮಗಳನ್ನು ಅಯೋಜಿಸುತ್ತಾ ಬಂದಿದೆ. ಪ್ರತಿ ವರ್ಷ ಜಾಗತಿಕ ಮಟ್ಟದಲ್ಲಿ ಏಕಕಾಲಕ್ಕೆ ವಿಷ್ಣು ಸಹಸ್ರನಾಮ ಪಾರಾಯಣ ನಡೆಯುತ್ತದೆ. ಈ ಕಾರ್ಯಕ್ರಮದ ನಿಮಿತ್ತ ಈಗಾಗಲೇ ನಗರದ ದೇವಾಲಯಗಳಲ್ಲಿ ವಿಷ್ಣುಸಹಸ್ರನಾಮ ಪಾರಾಯಣ ವಿಶೇಷ ಪೂಜೆಗಳು ನಡೆಯುತ್ತಿವೆ. ಮಾ.3 ರಂದು ನಡೆಯುವ ಈ ವಿಶೇಷ ಕಾರ್ಯಕ್ರಮದಲ್ಲಿ ಆಧ್ಯಾತ್ಮಿಕ ಬಂಧುಗಳು ಪಾಲ್ಗೊಳ್ಳಬೇಕೆಂದು ಕೋರಿದರು. ಸುದ್ದಿಗೋಷ್ಠಿಯಲ್ಲಿ ಸಮಿತಿಯ ಮುಖಂಡರಾದ ಗುರುರಾಜ ಭಟ್, ಶ್ರೀಪತಿ ಆಚಾರ್ಯ, ವಾದಿರಾಜ ಭಟ್, ನರಸಿಂಹಾಚಾರ್ಯ ಮತ್ತು ರಾಮಮೂರ್ತಿ ಆಚಾರ್ಯ ಇದ್ದರು.